# ಪಠ್ಯಪೂರಕ ಅಧ್ಯಯನ 4 – ಮೃಗ ಮತ್ತು ಸುಂದರಿ

ಪಿ. ಲಂಕೇಶ್ : ಪಾಳ್ಯ ಲಂಕೇಶ್ ಅವರು ಮಾರ್ಚ್ 8, 1935 ರಂದು ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿ ಗ್ರಾಮದಲ್ಲಿ ಜನಿಸಿದರು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಆಂಗ್ಲ ಭಾಷೆಯ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. 1962 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದರು. 1979ರ 'ಲಂಕೇಶ್ ಪತ್ರಿಕೆ' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಸಂಕ್ರಾಂತಿ, ಈಡಿಪಸ್ ಮತ್ತು ಅಂತಿಗೊನೆ, ಮುಂತಾದ ನಾಟಕಗಳನ್ನೂ, ಕಲ್ಲು ಕರಗುವ ಸಮಯ, ಕೆರೆಯ ನೀರನು ಕೆರೆಗೆ ಚೆಲ್ಲಿ, ಉಲ್ಲಂಘನೆ, ಮಂಜು ಕವಿದ ಸಂಜೆ ಮುಂತಾದ ಕಥಾ ಸಂಗ್ರಹಗಳನ್ನೂ, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ ಕಾದಂಬರಿಗಳನ್ನೂ, ಹಲವಾರು ಅಂಕಣ ಬರಹಗಳನ್ನೂ, ಹುಳಿ ಮಾವಿನಮರ ಆತ್ಮಕಥೆಯನ್ನೂ ರಚಿಸಿದ್ದಾರೆ. ಚಲನಚಿತ್ರ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸರಕಾರದಿಂದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳು ಲಭಿಸಿವೆ. ಪ್ರಸ್ತುತ ಕಥೆಯನ್ನು 'ಕಲ್ಲು ಕರಗುವ ಸಮಯ' ಕಥಾ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.



ಒಂದು ಊರಿನಲ್ಲಿ ಮೃದು ಸ್ವಭಾವದ ವರ್ತಕನಿದ್ದನು. ಆತ ಧರ್ಮವಂತನಾಗಿದ್ದ. ಅವನಿಗೆ ಮೂವರು ಹೆಣ್ಣು ಮಕ್ಕಳಿದ್ದರು. ಹಿರಿಯರಾದ ಇಬ್ಬರು ಬಿಂಕ, ಬಡಿವಾರದ ಹುಡುಗಿಯರು. ಫ್ಯಾಷನ್ ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ. ತಂದೆ ಶ್ರೀಮಂತ ವರ್ತಕನಾಗಿದ್ದುದರಿಂದ ತೊಂದರೆ ಆಗಲಿಲ್ಲ. ಮೂರನೆಯ ಹುಡುಗಿ ತಂದೆಯಷ್ಟೆ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು. ಒಂದು ಸಲ ವರ್ತಕನ ಜೀವನದಲ್ಲಿ ಬಡತನ ಆವರಿಸಿತು. ಬಡತನದಿಂದ ವರ್ತಕನಿಗೆ ಮತ್ತು ಸುಂದರಿ ಅಷ್ಟೇನೂ ತೊಂದರೆ ಆಗಲಿಲ್ಲ. ಅವರ ಜೀವನ ಸರಳವಾಗಿತ್ತು.

ಮತ್ತೊಂದು ದಿನ ವರ್ತಕ ಕಾಡಿನಲ್ಲಿ ಬರುವಾಗ ಅರಮನೆಯೊಂದು ಸಿಕ್ಕಿತು. ಆ ಅರಮನೆಗೆ ಹೋಗಿ ಸವಿಯಾದ ಭೋಜನ ಸವಿದು ಹೊರಬಂದಾಗ ಗುಲಾಬಿ ತೋಟ ನೋಡಿದನು. ತನ್ನ ಮಗಳು ಸುಂದರಿಗೆ ಗುಲಾಬಿ ಹೂವೊಂದನ್ನು ಕಿತ್ತಾಗ ಅಲ್ಲಿದ್ದ ಮೃಗವೊಂದು "ತಿಂದಿದ್ದೀ; ತೇಗಿದ್ದೀ; ಗುಲಾಬಿ ಕಿತ್ತಿದ್ದೀ" ಎಂದು ಸಿಟ್ಟಿನಿಂದ ಅಬ್ಬರಿಸಿ "ಕೇಳು! ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ. ನೀನು ತಪ್ಪಿಸಿಕೊಳ್ಳಲಾರೆ. ಈ ಬುಟ್ಟಿ ತೆಗೆದುಕೋ. ಇದರೊಂದಿಗೆ ಹೋಗು ನಾಳೆ ಸಂಜೆ ಒಳಗೆ ನಿನ್ನ ಮಗಳನ್ನು ಕರೆತರದಿದ್ದರೆ ನಿನ್ನನ್ನು ನಿನ್ನ ಮಗಳನ್ನು ಒಟ್ಟಿಗೇ ಮುಗಿಸುತ್ತೇನೆ!" ಅಂದಿತು. ಅದಕ್ಕೆ ಒಪ್ಪಿ ವರ್ತಕ ಸುಂದರಿಯನ್ನು ಮೃಗದ ಅರಮನೆಗೆ ಕಳುಹಿಸಿದನು. ಆ ಮೃಗವಾದರೂ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಕರ್ಕಶ ಸದ್ದು, ಗೊಗ್ಗರು ಧ್ವನಿಯೊಂದಿಗೆ ಅವಳನ್ನು ದಿಟ್ಟಿಸಿ ನೋಡುತ್ತಾ, "ನೀನು ಸಂತೋಷದಿಂದ ಬಂದೆಯಾ?" ಎಂದು ಕೇಳಿತು. ಆ

ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಮೃಗವೂ ಎಂದು ತನ್ನ ವಚನವನ್ನು ಮುರಿಯುಲಿಲ್ಲ ಮನ ನೋಯಿಸಿರಲಿಲ್ಲ ಸುಂದರಿಯನ್ನು ನೆಮ್ಮದಿಯಾಗಿ ಇಡುವುದೇ ಅದರ ಸುಖವಾಗಿತ್ತು. ಆದ್ದರಿಂದ ತನ್ನ ಕಾಳಜಿಯನ್ನು ನೆನೆದು ಸುಂದರಿಯ ಮನ ಕರಗುತ್ತಿತ್ತು. ಆ ಮೃಗ ನಿಜವಾದ ಮೃಗವಾಗಿರಲಿಲ್ಲ. ದೇವತೆಯ ಶಾಪದಿಂದ ಅದಕ್ಕೆ ರಾಜಕುಮಾರನೋರ್ವ ಮೃಗದ ರೂಪವನ್ನು ತಾಳಿದ್ದನು."ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ರಾಜಕುಮಾರನೊಬ್ಬನಿಗೆ ದೇವತೆಯೊಬ್ಬಳು ಶಾಪ ಹಾಕಿದ್ದಳು. ಸುಂದರಿ ಮೃಗವನ್ನು ಮನಸಾರೆ ಪ್ರೀತಿಸಿ ಮದುವೆಯಾಗುತ್ತೇನೆ ಎಂದಿದ್ದರಿಂದ ಮೃಗರೂಪದಲ್ಲಿದ್ದ ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ ಝಗಮಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

## ಅ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

**1. ಶಾಪ ವಿಮೋಚನೆಯ ಫಲವೇನು ?**

**ಉತ್ತರ :** ಸುಂದರಿ ಮೃಗವನ್ನು ಮನಸಾರೆ ಪ್ರೀತಿಸಿ ಮದುವೆಯಾಗುತ್ತೇನೆ ಎಂದಿದ್ದರಿಂದ  ಮೃಗರೂಪದಲ್ಲಿದ್ದ ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರ  ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ  ಝಗಮಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

**2. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ ?**

**ಉತ್ತರ :** ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಮೃಗವೂ ಎಂದು ತನ್ನ ವಚನವನ್ನು ಮುರಿಯುಲಿಲ್ಲ ಮನ ನೋಯಿಸಿರಲಿಲ್ಲ ಸುಂದರಿಯನ್ನು ನೆಮ್ಮದಿಯಾಗಿ ಇಡುವುದೇ ಅದರ ಸುಖವಾಗಿತ್ತು. ಆದ್ದರಿಂದ ತನ್ನ ಕಾಳಜಿಯನ್ನು ನೆನೆದು ಸುಂದರಿಯ ಮನ ಕರಗುತ್ತಿತ್ತು.

**3. ದೇವತೆ ಕೊಟ್ಟ ಶಾಪವೇನು ?**

**ಉತ್ತರ :**"ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ರಾಜಕುಮಾರನೊಬ್ಬನಿಗೆ ದೇವತೆಯೊಬ್ಬಳು ಶಾಪ ಹಾಕಿದ್ದಳು.

**4. ಮೃಗ ಮತ್ತು ಸುಂದರಿ ಕತೆಯಲ್ಲಿ ಬರುವ ವರ್ತಕನ ಮೂರು ಮಕ್ಕಳ ವರ್ತನೆ ಹೇಗಿತ್ತು ?**

**ಉತ್ತರ :**ಮೃಗ ಮತ್ತು ಸುಂದರಿ ಕತೆಯಲ್ಲಿ ಬರುವ ವರ್ತಕನಿಗೆ ಮೂರು ಮಕ್ಕಳ ಮಕ್ಕಳಿದ್ದರು.  ಹಿರಿಯರಾದ ಇಬ್ಬರು ಮಕ್ಕಳು ಬಿಂಕ, ಬಡಿವಾರದ ಹುಡುಗಿಯರು. ಫ್ಯಾಷನ್ ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ. ತಂದೆ ಶ್ರೀಮಂತ ವರ್ತಕನಾಗಿದ್ದುದರಿಂದ ತೊಂದರೆ ಆಗಲಿಲ್ಲ. ಮೂರನೆಯ ಹುಡುಗಿ ತಂದೆಯಷ್ಟೆ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು. ಆಕೆಯ ಜೀವನ ಸರಳವಾಗಿತ್ತು.

**5. ಸುಂದರಿ ಮತ್ತು ಅವಳ ತಂದೆಗೆ ಬಡತನ ಏಕೆ ಕಷ್ಟವಾಗಲಿಲ್ಲ ?**

**ಉತ್ತರ :** ಸುಂದರಿಮೂರನೆಯ ಹುಡುಗಿ ತಂದೆಯಷ್ಟೆ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ.. ಒಂದು ಸಲ ವರ್ತಕನ ಜೀವನದಲ್ಲಿ ಬಡತನ ಆವರಿಸಿತು. ಬಡತನದಿಂದ ವರ್ತಕನಿಗೆ ಮತ್ತು ಸುಂದರಿ ಅಷ್ಟೇನೂ ತೊಂದರೆ ಆಗಲಿಲ್ಲ. ಅವರ ಜೀವನ ಸರಳವಾಗಿತ್ತು.

**6. ವರ್ತಕನ  ಮೂರನೆಯ ಮಗಳ ವರ್ತನೆ ಮತ್ತು ರೂಪ ಹೇಗಿತ್ತು ? ವಿವರಿಸಿ**

**ಉತ್ತರ :** ಸುಂದರಿವರ್ತಕನಮೂರನೆಯ ಮಗಳು. ತಂದೆಯಷ್ಟೆ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ..ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು. ಅವಳ ಜೀವನ ಸರಳವಾಗಿತ್ತು.

**7. ಮೃಗದ ಬಾಹ್ಯ ಆಕಾರ ಹೇಗಿತ್ತು ?**

**ಉತ್ತರ :**  ಮೃಗ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಕರ್ಕಶ ಸದ್ದು, ಗೊಗ್ಗರು ಧ್ವನಿಯೊಂದಿಗೆ ಮೃಗ ಒರಟು ಸ್ವಭಾವದ್ದಾಗಿತ್ತು. ಮಾತು, ತಿಕ್ಕಲು ನಡವಳಿಕೆಯಿತ್ತು.

**8. ವರ್ತಕ ಗುಲಾಬಿ ಹೂವನ್ನು ಕಿತ್ತುಕೊಂಡಾಗ ಮೃಗ ಏನು ಹೇಳಿತು ?**

**ಉತ್ತರ :** ವರ್ತಕ ತನ್ನ ಮಗಳು ಸುಂದರಿಗೆ ಗುಲಾಬಿ ಹೂವೊಂದನ್ನು ಕಿತ್ತಾಗ ಅಲ್ಲಿದ್ದ ಮೃಗವೊಂದು "ತಿಂದಿದ್ದೀ; ತೇಗಿದ್ದೀ; ಗುಲಾಬಿ ಕಿತ್ತಿದ್ದೀ" ಎಂದು  ಸಿಟ್ಟಿನಿಂದ ಅಬ್ಬರಿಸಿ "ಕೇಳು! ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ. ನೀನು ತಪ್ಪಿಸಿಕೊಳ್ಳಲಾರೆ. ಈ ಬುಟ್ಟಿ ತೆಗೆದುಕೋ. ಇದರೊಂದಿಗೆ ಹೋಗು ನಾಳೆ ಸಂಜೆ ಒಳಗೆ ನಿನ್ನ ಮಗಳನ್ನು ಕರೆತರದಿದ್ದರೆ ನಿನ್ನನ್ನು ನಿನ್ನ ಮಗಳನ್ನು ಒಟ್ಟಿಗೇ ಮುಗಿಸುತ್ತೇನೆ!" ಅಂದಿತು.

**9.ವರ್ತಕ ಹಳ್ಳಿಗೆ ಹೋಗಬೇಕಾದ ಸಂದರ್ಭ ಯಾಕೆ ಬಂದಿತು ?**

**ಉತ್ತರ :**ವರ್ತಕನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲತೀರಿಸಿ, ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆ ಕೊಂಡು ಇರಲು ಹೋಗ ಬೇಕಾದ ಸಂದರ್ಭ ಬಂದಿತು.